ಅ) ಹೌದು. 60 ವರ್ಷಕ್ಕೂ ಹೆಚ್ಚಿನ ವಯಸ್ಸಾದ ಹಿರಿಯ ನಾಗರೀಕರಿಗೆ ರಿಯಾಯ್ತಿ ದರದಲ್ಲಿ ಬಸ್ ಪಾಸ್ ನೀಡುವ ಯೋಜನೆ ಜಾರಿಯಲ್ಲಿದ್ದಿತು. ಅದನ್ನು 17-12-91ರಿಂದ ನಿಲ್ಲಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹಮಂಡಳಿ ವಶಪಡಿಸಿಕೊಂಡಿರುವ ಜಮೀನಿನ ಪೈಕಿ ಖಾಲಿ ಇರುವ ಜಮೀನಿನ ವಿಸ್ತೀರ್ಣ.

4159(4343) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಗೃಹ ಮಂಡಳಿ ವಶಪಡಿಸಿಕೊಂಡಿರುವ ಜಮೀನಿನ ಪೈಕಿ ಖಾಲಿಯಿರುವ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಜಮೀನಿನ ಪೈಕಿ ಎಷ್ಟು ಜಮೀನನ್ನು ಎಲ್ಲೆಲ್ಲಿ ರಾಜೀವ ಗಾಂಧಿ ವಸತಿ ನಿಗಮಕ್ಕೆ ಹಸ್ತಾಂತರಿಸಲಾಗಿದೆ;

ಇ) ಹಸ್ತಾಂತರಿಸಿದ ಜಮೀನನ್ನು ಕರ್ನಾಟಕ ಗೃಹಮಂಡಳಿ ಭೂ ಸ್ವಾಧೀನಗೊಳಿಸಿಕೊಂಡಾಗ ನಿಗಧಿಪಡಿಸಿದ ಅವಾರ್ಡ್ ಕ್ರಯದ ಮೊಬಲಗು ಎಷ್ಟು?

ಈ) ಹಸ್ತಾಂತರಿಸಿದ ಜಮೀನಿಗೆ ರಾಜೀವ್‌ಗಾಂಧಿ ವಸತಿ ನಿಗಮದಿಂದ ಕರ್ನಾಟಕ ಗೃಹಮಂಡಳಿಗೆ ಎಷ್ಟು ಹಣವನ್ನು ಪಡೆಯಲಾಗಿದೆ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):—

ಅ) ಜಿಲ್ಲಾವಾರು ಖಾಲಿ ಇರುವ ಜಮೀನಿನ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಈ ಪೈಕಿ ಬೆಂಗಳೂರು ನಗರ ಜಿಲ್ಲೆ ಕೆಂಗೇರಿ ಗ್ರಾಮದ ಸ.ನಂ. 205, 268 ಮತ್ತು 269ರಲ್ಲಿ 19.31 ಎಕರೆ ಜಮೀನನ್ನು ಮಂಡಳಿಯ ನಿರ್ಣಯದ ಸಂಖ್ಯೆ ಇ9 ದಿ: 7.6.2000ರಂತೆ ತಡವಾಗಿದ್ದರೂ ಬೀಡಿ ಕಾರ್ಮಿಕರ ವಸತಿ ಯೋಜನೆಯನ್ನು ತ್ವರಿತಗೊಳಿಸಲು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ದಿ: 22.09.2000ರಂದು ಹಸ್ತಾಂತರಿಸಲಾಗಿದೆ.

ಇ) ಈ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡು ತಯಾರಿಸಿದ ಅವಾರ್ಡ್‌ನಂತೆ ಪರಿಹಾರದ ಹಣ ರೂ. 20.08 ಲಕ್ಷ.

ಈ) ರಾಜೀವ್‌ಗಾಂಧಿ ವಸತಿ ನಿಗಮವು ಇನ್ನೂ ಪಾವತಿಸಬೇಕಾಗಿದೆ.

ಅನುಬಂಧ ಸಂಖ್ಯೆ: ಮಾಲಾಇಯುಹೆಚ್‌ಎಸ್ ೨೦೦೦

ಜಿಲ್ಲಾವಾರು ಖಾಲಿ ಇರುವ ಜಮೀನಿನ ವಿವರ

ಸರ್ವೆ ನಂ.	ಜಿಲ್ಲೆಗಳು	ವಿಸ್ತೀರ್ಣ (ಎಕರೆ : ಗುಂಟೆಗಳಲ್ಲಿ)
1.	ಬೆಂಗಳೂರು ನಗರ	300.39
2.	ಬೆಂಗಳೂರು ಗ್ರಾಮಾಂತರ	64.01
3.	ಕೋಲಾರ	16.02
4.	ತುಮಕೂರು	86.18
5.	ಹಾಸನ	8.13
6.	ಮಂಡ್ಯ	203.25
7.	ಚಿಕ್ಕಮಗಳೂರು	60.39
8.	ದಾವಣಗೆರೆ	11.12
9.	ಚಿತ್ರದುರ್ಗ	50.20
10.	ಶಿವಮೊಗ್ಗ	60.00
11.	ಧಾರವಾಡ	160.17
12.	ಉತ್ತರ ಕನ್ನಡ	56.10
13.	ಬಾಗಲಕೋಟೆ	51.08
14.	ಬೆಳಗಾಂ	95.13
15.	ದಕ್ಷಿಣ ಕನ್ನಡ	78.26
16.	ಉಡುಪಿ	4.18
17.	ಗುಲ್ಬರ್ಗಾ	42.04
18.	ರಾಯಚೂರು	18.25
19.	ಬಳ್ಳಾರಿ	7.20
20.	ಬಿಜಾಪುರ	33.05
21.	ಬೀದರ್	48.22
22.	ಗದಗ	182.15
23.	ಹಾವೇರಿ	8.00
	ಒಟ್ಟು	1648.38